# ಹೊಸ ಹೃದಯದ ಹಾಡು

ಸಂಗ್ರಹ : ಸುನಯನ ಪಾಲ್ಸರ್ಸ್

ದೇವರ ಸೇವಕರಾದ ಸಿ.ಎ. ಸ್ವಾನ್ ದಂಪತಿಗಳ 10 ತಿಂಗಳ ಪುಟ್ಟ ಮಗನು ದೂರದ ಆಫ್ರಿಕಾ ದೇಶದಲ್ಲಿ ತೀರಿಹೋದನು. ಬಹಳ ವರ್ಷದ ನಂತರ ಪುನಃ ಆ ಪ್ರದೇಶಕ್ಕೆ ಭೇಟಿ ಕೊಟ್ಟಾಗ ಸ್ವಾನ್ ಅವರು ಬರೆದರು –

"ನನಗೆ ಸ್ವಲ್ಪ ಸಮಯ ದೊರೆತರೂ ನಾನು ನನ್ನ ಪುಟ್ಟ ರೆಗ್ಗಿಯ ಸಮಾಧಿ ಸ್ಥಳಕ್ಕೆ ಒಂಟಿಯಾಗಿ ಹೋಗಿ ನನ್ನ ಪ್ರೀತಿಯ ಮಗನ ಅದ್ಭುತ ನೆನಪುಗಳನ್ನು ಮೆಲುಕುಹಾಕುತ್ತಿದ್ದೆ. ಹಿಂತಿರುಗುವ ಮೊದಲು 14 ವರ್ಷಗಳ ಹಿಂದೆ ಬರೆದುದನ್ನು ಓದುತ್ತಿದ್ದೆ – "ರೆಜಿನಾಲ್ಡ್ ಟ್ರೆಮಿಯರ್ ಸ್ವಾನ್, ದೇವರ ಬಳಿ ಒಯ್ಯಲ್ಪಟ್ಟಿದ್ದಾನೆ. ಪ್ರಾಯ ಹತ್ತುವರೆ ತಿಂಗಳು." ಆಗ ಪರಲೋಕ ರಾಜ್ಯವು ಬಹಳ ಹತ್ತಿರವಿದ್ದಂತಹ ಅನುಭವವಾಗುತ್ತಿತ್ತು.

ನಾವು ಆ ಪ್ರದೇಶಕ್ಕೆ ಮೊದಲು ಬಂದಾಗ ನಮ್ಮ ಮನೆ ಇದ್ದ ಜಾಗದಲ್ಲಿ ಈಗ ಮಣ್ಣಿನ ದಿಬ್ಬವಿತ್ತು. ಆಗ ಆ ಕತ್ತಲಿನ ಒಚಿಲೊಂಡಾ ಊರಿನಲ್ಲಿ ದೇವರವಾಕ್ಯದ ಹೊಸ ಬೆಳಕನ್ನು ನಾವು ತಂದಿದ್ದೆವು. ಸುತ್ತಲೂ ದೃಷ್ಟಿ ಹರಿಸಿದಾಗ ಲೆಕ್ಕವಿಲ್ಲದಷ್ಟು ಕ್ರೈಸ್ತರ ಮನೆಗಳು ಈಗ ಕಂಡು ಬರುತ್ತಿದ್ದವು. ಆ ಯೋಜನೆಗಳಿಂದ ಆವರಿಸ್ಪಟ್ಟು ನಾನು ಅಲ್ಲಿ ನಿಂತಾಗ, ಓಹ್, ಎಂತಹ ನೆನಪು! ನೆನಪುಗಳು ಒತ್ತರಿಸಿ ಬರುತ್ತಿದ್ದವು."

ದೇವರ ಪ್ರೀತಿಯನ್ನು ಅರಿತುಕೊಂಡ ತಂದೆ–ತಾಯಿಯ ಮಗುವಾಗಿ ಹುಟ್ಟುವುದು ಎಂತಹ ಅನುಕೂಲಕರ! ಅಂತಹವರ ಸುತ್ತಲಿರುವವರೆಲ್ಲರಿಗೂ ಆ ಪ್ರೀತಿಯ ಅನುಭವವಾಗುವುದು. ಒಬ್ಬಾತನು ರಕ್ಷಣೆ ಹೊಂದಿದ್ದಾನೆಂದು ನಮಗೆ ತಿಳಿಯುವುದು ಹೇಗೆ? – ಎಂದು ಕೆಲವರು ಕೇಳುತ್ತಾರೆ. ಒಂದು ಕತ್ತಲಿನ ಗುಡಿಸಲಿನಲ್ಲಿದ್ದಾಗ, ಸೂರ್ಯನ ಕಿರಣಗಳು ಒಳಗೆ ಪ್ರವೇಶಿಸದಂತಿದ್ದರೂ, ಬೆಳಗಾಗಿದೆಯೆಂದು ಹೇಗೆ ತಿಳಿಯುತ್ತದೆ? ಸೂರ್ಯೋದಯದ ಸಮಯದಲ್ಲಿ ಕೇಳಿಬರುವ ಹಕ್ಕಿಗಳ ಹಾಡಿನಿಂದ ಅದು ತಿಳಿದುಬರುತ್ತದೆಯಲ್ಲವೆ? ಮೂಡಿಬರುವ ಸೂರ್ಯನ ಪ್ರಕಾಶವು ಮೂಡುದಿಕ್ಕನ್ನು ಬೆಳಗಿಸಿದೆಯೋ ಎಂದು ಹೊರಗೆ ಬಂದು ನೋಡುವ ಅಗತ್ಯತೆ ಇಲ್ಲ. ಹಕ್ಕಿಗಳ ಹಾಡು ನಮ್ಮ ಗುಡಿಸಲಿನ ಕತ್ತಲೆಯನ್ನು ಬೇಧಿಸಿ ಒಳಗೆ ಬರುತ್ತದೆ. ಕ್ರೈಸ್ತತ್ವದ ಹೊಸ ಹೃದಯವೂ ಇದೇ ರೀತಿ. ನಾವು ಚರ್ಮ ಮಾಂಸಗಳನ್ನು ಬೇಧಿಸಿ ಒಳಹೊಕ್ಕು ಅದನ್ನು ಪರೀಕ್ಷಿಸಲಾಗುವುದಿಲ್ಲ. ಆದರೆ ಹೊಸ ಹೃದಯದಿಂದ – ಸೂರ್ಯನ ಪ್ರಥಮ ಕಿರಣಗಳೊಂದಿಗೆ ಹೊರ ಹೊಮ್ಮುವ ಹಕ್ಕಿಗಳ ಹಾಡಿನಂತಹ – ಹಾಡ ಹೊರಮೊಮ್ಮುತ್ತದೆ. ■



## Jesus is Lord



**PRAYER FOR 24 HOURS**



For your Prayer call
Bible Tower,
**P|| Vincent Johnson,**
Bible Tower
Chigarapura Kolar
563121
Ph : 08153 - 277716, Mob : 9845602481
08153-312010, Mob :9141698717

**24 ತಾಸುಗಳೂ ಪ್ರಾರ್ಥನಾ ಸರಣಿ**

ನಿಮ್ಮ ಪ್ರಾರ್ಥನಾ ಮನವಿಗಳಿಗೆ
"ಪ್ರಾರ್ಥನಾ ಕೊಠಡಿ" ಸತ್ಯವೇದ ಗೋಪುರ
ಪಾ|| ವಿನ್ಸೆಂಟ್ ಜಾನ್‌ಸನ್, ಬೈಬಲ್ ಟವರ್
ಚಿಗರಾಪುರ – ಕೋಲಾರ 563121
ದೂರವಾಣಿ : 08153 – 277716 ಮೊ : 9845602481
08153 – 312010 ಮೊ : 9141698717

**WISH YOU A BLESSED NEW YEAR**